ಅಸಲು ದಾವಾ 62/2016

ಸಾಕ್ಷಿಯನ್ನು ದಿನಾಂಕಃ **24.01.2024** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರಿದ ಪಾಟೀ ಸವಾಲು

ಮರಿಯಕ್ಕನ ಜೊತೆ ಎಷ್ಟು ಮಕ್ಕಳು ಎಂದು ಗೊತ್ತಿಲ್ಲ ಸರ್ವೆ ನಂ.7 ರ ಪಶ್ಚಿಮಕ್ಕೆ ಸರ್ವೆ ನಂ.6 ಬರುತ್ತದೆ. ಮರಿಯಕ್ಕನಿಗೆ ದಾವಾ ಸರ್ವೆ ನಂಬರ್ ಬಿಟ್ಟು ಬೇರೆ ಆಸ್ತಿ ಇರುವುದಿಲ್ಲ. ಸರ್ವೆ ನಂ.66 ಮತ್ತು 47 ರಲ್ಲಿ ಅವರಿಗೆ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ಮರಿಯಕ್ಕ ಮತ್ತು ಅವರ ಮಗ ಬೋರೆಗೌಡ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಸುಬ್ಬಯ್ಯನ ಮಕ್ಕಳು ಕೆಂಪೇಗೌಡನಿಗೆ ಮಾರಾಟ ಮಾಡಿದ್ದಾರೆ ಮತ್ತು ಅದನ್ನು ಕೆಂಪೇಗೌಡರು ಅಂಕಯ್ಯ ಉರುಫ್ ಚಿಕ್ಕೊನ್ನುರವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಈಗ ಸರ್ವೆ ನಂ.7 ರಲ್ಲಿ ಅಂಕಯ್ಯ ಉರುಫ್ ಚಿಕ್ಕೊನ್ನುರವರ ಮಕ್ಕಳು ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಉಳಿದ 19 ಎಕರೆ ಚಿಲ್ಲರೆ ಜಮೀನನ್ನು ಪ್ರತಿವಾದಿ 17 ರವರಿಗೆ ಪ್ರತಿವಾದಿ 2 ರಿಂದ 4 ಮತ್ತು ಬೋರಯ್ಯ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಸರ್ವೆ ನಂಬರ್ 7 ರಲ್ಲಿ ಈ ಬಗ್ಗೆ ಉಲ್ಲೇಖವಿದೆ ಎಂದರೆ ಸೃಷ್ಟಿ ಮಾಡಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ದಾವಾಸ್ದಿ ಚಿಕ್ಕನಂಜುಂಡ ಮತ್ತು ಮರಿಯಕ್ಕನ ವಾರಸುದಾರರ ಸ್ವಾಧೀನತೆಯಲ್ಲಿದೆ ಆರ್.ಟಿ.ಸಿ. ಕೂಡ ಅವರ ಹೆಸರಿನಲ್ಲಿದೆ. ನನ್ನ ಅಜ್ಜಿ ಭಾಗಕ್ಕೆ ಪ್ರಕರಣ ಮಾಡಿರುವುದಿಲ್ಲ. ಈ ಬಗ್ಗೆ ದಾಖಲೆ ನೋಡಿದ್ದೇನೆ. ಕಂದಾಯ ಮತ್ತು ಪೂರಕ ದಾಖಲೆ ಇದ್ದು ಹಾಜರು ಮಾಡಿದ್ದೇನೆ ಅಂದರೆ ಸರ್ವೆ ಮತ್ತು ಕಂದಾಯ ದಾಖಲಾತಿಗಳನ್ನು ನೋಡಿದ್ದೇನೆ. ದಾವಾ ಆಸ್ತಿಯಲ್ಲಿ ನಮಗೆ

ಹಕ್ಕು ಅಥವಾ ಸ್ವಾಧೀನತೆ ಇಲ್ಲವೆಂದರ ಸರಿಯಲ್ಲ. ನಾನು ನನ್ನ ತಂದೆ ಪರವಾಗಿ ದಾವೆ ಮಾಡಿದ್ದೇನೆ. ನಮ್ಮ ತಂದೆ ಮರಿಯಕ್ಕನ ವಾರಸುದಾರರಾದ್ದರಿಂದ ದಾವೆ ಮಾಡಿರುತ್ತಾರೆ. ನನ್ನ ದೊಡ್ಡಪ್ಪ ಬೋರೆಗೌಡನಿಗೆ ಹೊರತುಪಡಿಸಿ ಯಾರಿಗೂ ಹಕ್ಕು ಇಲ್ಲವೆಂದರೆ ಸರಿಯಲ್ಲ. ಈಗ ದಾವಾಆಸ್ತಿಯ ಪಶ್ಚಿಮಕ್ಕೆ ಹಳೆ ಹಳ್ಳಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಗೆ ಭೂ ಸ್ವಾಧೀನವಾಗಿದೆ ಎಂದರೆ ಸರಿಯಲ್ಲ. ನಂಜಪ್ಪ ಮತ್ತು ಪುಟ್ಟಸ್ವಾಮಿ ಪರಿಹಾರ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ನನಗೆ ನನ್ನ ತಂದೆಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ಓ. ಹೇ. ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.